# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 176/2015 ಸಿಡಬ್ಲೂ: 13 ಪಿಡಬ್ಲೂ: 9

ಪ್ರಮಾಣವಚನ ಬೋಧಿಸಲಾಯಿತು ದಿಃ 30-07-2025

ಹೆಸರು : ನಾಗರಾಜ

ತಂದೆ ಹೆಸರು : ರಾಜಪ್ಪ

ವಯಸ್ಸು : 29 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಬಸವನಗರ, ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

1 ಮತ್ತು 2 ನೇ ಆರೋಪಿತರು ನನಗೆ ಪರಿಚಯ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಈ ಘಟನೆ ಕುರಿತು ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.02-07-2014 ರಂದು ಸಾಯಂಕಾಲ 07-00 ಗಂಟೆ ಸುಮಾರಿಗೆ ಚಾ ಸಾ 9 ರವರು ನನಗೆ ಮತ್ತು ಚಾ ಸಾ 10 ರಿಂದ 12 ರವರಿಗೆ ಕರೆ ಮಾಡಿ 1 ನೇ ಆರೋಪಿತರ ಅಂಗಡಿಯಲ್ಲಿ ಅಕ್ಕಿ , ಗೋಧಿ ಮತ್ತು ಸಕ್ಕರೆ ಲೋಡು ಮಾಡಲು ಕರೆದಿದ್ದರು ಎಂದರೆ ಸರಿಯಿಲ್ಲ. ಆಗ ನಾವು ರಾತ್ರಿ 10-00 ಗಂಟೆ ಸುಮಾರಿಗೆ ಲಾರಿ ನಂ. ಎ ಪಿ 27 ಡಬ್ಲ್ಯೂ 9637 ನೇದ್ದರಲ್ಲಿ ಲೋಡು ಮಾಡಿ ನಿಂತಾಗ ಚಾ ಸಾ 1, 7, 8 ರವರು ಬಂದು ದಾಳಿ ಮಾಡಿ ಆಹಾರ ಧಾನ್ಯಗಳನ್ನು ಎಲ್ಲಿಗೆ ಒಯ್ಯುತ್ತಿದ್ದೀರಿ ಎಂದು ಕೇಳಿದರು ಎಂದರೆ ಸರಿಯಿಲ್ಲ. ಆಗ 1 ನೇ ಆರೋಪಿತನು ಹೇಳಿದಂತೆ ಗುರುಮಿಟ್ಕಲ್ ಗ್ರಾಮಕ್ಕೆ ಕಳುಹಿಸುತ್ತಿದ್ದೇನೆ ಎಂದು ಹೇಳಿದರು ಎಂದರೆ ಸರಿಯಿಲ್ಲ. ಆಗ ಚಾ ಸಾ 1,7,8 ರವರು ಆರೋಪಿತರು ಆಹಾರ ಧಾನ್ಯಗಳನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುವುದಾಗಿ ಪಂಚನಾಮೆ ಮಾಡಿದ್ದರು ಎಂದರೆ ಸರಿಯಿಲ್ಲ. ಸದರಿ ಲಾರಿಯಲ್ಲಿ ತಲಾ 50 ಕೆ ಜಿ ತುಕ ಉಳ್ಳ 148 ಅಕ್ಕಿ ಚೀಲಗಳು, ತಲಾ 25 ಕೆ ಜಿ ತುಕ ಉಳ್ಳ 133 ಗೋಧಿ ಚೀಲಗಳು

ಮತ್ತು 80 ಗೋಧಿ ಪಾಕೇಟುಗಳು ಲಾರಿಯಲ್ಲಿದ್ದವು ಎಂದರೆ ಸರಿಯಿಲ್ಲ. ನಾನು ಸ್ಥಳದಲ್ಲಿ ಇದ್ದರೂ ಸಹ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ಓದಿ ಹೇಳಲಾಯಿತು ಸಾಕ್ಷಿಯು ಅದರಲ್ಲಿರುವ ವಿಷಗಳನ್ನು ನಿರಾಕರಿಸಿರುವುದರಿಂದ ಸದರಿ ನಿರಾಕರಿಸಿದ ಭಾಗವನ್ನು ನಿ ಪಿ 6 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**